**ಕರ್ನಾಟಕ ವಿಧಾನ ಪರಿಷತ್ತು**

**ಲಘು ಪ್ರಕಟಣೆ**

**(ಸಾಂಸದಿಕ ಹಾಗೂ ಇತರ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**28ನೇ ಜನವರಿ, 2025**

**ಸಂಖ್ಯೆ: 03**

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳು ಹಾಗೂ ಮಾನ್ಯ ಮಾಜಿ ಸದಸ್ಯರುಗಳು ಶಾಸಕರ ಭವನದ ವಾಹನಗಳನ್ನು ಪಾವತಿ ಆಧಾರದ ಮೇಲೆ ಉಪಯೋಗಿಸುವ ಕುರಿತಂತೆ ದಿನಾಂಕ:06.06.2020ರಂದು ಹೊರಡಿಸಲಾಗಿರುವ ಲಘು ಪ್ರಕಟಣೆ ಸಂಖ್ಯೆ:66ರಲ್ಲಿ ತಿಳಿಸಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಈ ಕೆಳಕಂಡಂತೆ ಮಾರ್ಪಡಿಸಲಾಗಿದೆ.

1. ಶಾಸಕರ ಭವನದ ಒಂದು ವಾಹನವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ ಹೊರಗೆ ಅಂದರೆ ರಾಜ್ಯದ ಒಳಗೆ ಮಾನ್ಯ ಹಾಲಿ ಶಾಸಕರುಗಳು ಪಾವತಿ ಆಧಾರದ ಮೇಲೆ ತೆಗೆದುಕೊಂಡು ಹೋಗಲು ಅವಕಾಶ ಕಲ್ಪಿಸಲಾಗಿದ್ದು ಮಾನ್ಯ ಹಾಲಿ ಶಾಸಕರುಗಳು ಕನಿಷ್ಠ 24 ಗಂಟೆಗಳ ಮುಂಚಿತವಾಗಿ ಮಾನ್ಯ ಸಭಾಪತಿಯವರಿಗೆ ಪತ್ರವನ್ನು ನೀಡಿ ಸೂಕ್ತ ಕಾರಣಗಳನ್ನು ನಮೂದಿಸಿ ಮಾನ್ಯ ಶಾಸಕರುಗಳೇ ಉಪಯೋಗಿಸುವುದಾಗಿ ಮನವರಿಕೆ ಮಾಡಿಕೊಟ್ಟು ಅನುಮತಿ ಪಡೆಯಬೇಕಾಗಿರುತ್ತದೆ.
2. ಮಾನ್ಯ ಮಾಜಿ ಶಾಸಕರುಗಳು ಬೆಂಗಳೂರಿನಲ್ಲಿ ಮಾತ್ರ ಶಾಸಕರ ಭವನದ ವಾಹನಗಳನ್ನು ಪಾವತಿ ಆಧಾರದ ಮೇಲೆ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದೆ.

ಮೇಲ್ಕಂಡ ಷರತ್ತುಗಳನ್ನು ಪಾಲಿಸುವ ಮೂಲಕ ಮಾನ್ಯ ಶಾಸಕರುಗಳು ಸಹಕರಿಸಬೇಕೆಂದು ಕೋರಲಾಗಿದೆ.

ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಗೆ,

ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ/ಮಾಜಿ ಶಾಸಕರುಗಳಿಗೆ.